ಕರ್ನಾಟಕ ಸಮಾಜವಾದಿ ವೇದಿಕೆ ಮಾರ್ಚ್ 2021



## 'ಭಾರತದ ರೈತ' ಕೃತಿ ಹಿನ್ನೆಲೆಯಲ್ಲಿ

'ಭಾರತದ ರೈತ' ಎಂಬ ಈ ಕೃತಿಯು ಡಾ॥ ಲೋಹಿಯಾ ಅವರ Fragments of a World Mind ಕೃತಿಯಲ್ಲಿನ 'The Farmer of India' ಲೇಖನದ ಅನುವಾದ. ಲೋಹಿಯಾ ಅವರು 1949ರಲ್ಲಿ ಅಸ್ತಿತ್ವಕ್ಕೆ ಬಂದ 'ಹಿಂದ್ ಕಿಸಾನ್ ಪಂಚಾಯತ್'ನ ಮೊದಲ ಅಧ್ಯಕ್ಷರಾದರು. ಅದರ ಮೊದಲ ಅಧಿವೇಶನ 26 ಫೆಬ್ರುವರಿ 1950ರಂದು ರೇವಾದಲ್ಲಿ ನಡೆಯಿತು. ರೈತರು ಮೊಟ್ಟ ಮೊದಲ ಬಾರಿಗೆ ರಾಷ್ಟ್ರದ ವಿವಿಧ ಭಾಗಗಳಿಂದ ಬಹುಸಂಖ್ಯೆಯಲ್ಲಿ ಬಂದು ಸೇರಿದ್ದರು. ಆ ಅಧಿವೇಶನದ ಅಧ್ಯಕ್ಷ ಸ್ಥಾನದಿಂದ ಡಾ॥ ಲೋಹಿಯಾ ಮಾಡಿದ ಭಾಷಣವೇ ಮುಂದೆ ಲೇಖನವಾಗಿ ಬರೆಯಲ್ಪಟ್ಟಿತು. ಅದುವೇ The Farmer of India. ಅದರ ಅನುವಾದವೇ ಈ ಪುಟ್ಟ ಪುಸ್ತಕ 'ಭಾರತದ ರೈತ.'

ರೈತರ ಸಮಸ್ಯೆಗಳು, ಪರಿಹಾರಗಳು ಇವುಗಳನ್ನು ಪಾಶ್ಚಾತ್ಯ ರಾಷ್ಟ್ರಗಳ ರೈತರ ಸ್ಥಿತಿಗತಿಯೊಂದಿಗೆ ತೌಲನಿಕವಾಗಿ ಇಲ್ಲಿ ಚಿಂತಿಸಲಾಗಿದೆ. ಮಾರ್ಕ್ಸ್‌ವಾದ ಸೇರಿದಂತೆ ವಿವಿಧ ಸಿದ್ಧಾಂತಗಳನ್ನು ಆಳವಾಗಿ ಅಧ್ಯಯನ ಮಾಡಿದ ಲೋಹಿಯಾ, ಸಮಾಜವಾದದ ಅಗತ್ಯವನ್ನು ಎತ್ತಿ ಹಿಡಿದರು. ಆ ಸಮಾಜವಾದದ ಏಳು–ಬೀಳುಗಳು, ಸಮಾಜವಾದಿಯಾದವರ ಬದ್ಧತೆಗಳನ್ನು ಕುರಿತ ಮುಕ್ತ ವಿಮರ್ಶೆ ಮಾಡಲು ಅವರು ಹಿಂಜರಿಯಲಿಲ್ಲ. ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಕ್ರಮಿಸಿದ ರೀತಿಯನ್ನು ವಿಮರ್ಶೆ ಮಾಡುತ್ತಲೇ, ಈ ದೇಶದ ಬಡತನ ನಿವಾರಣೆಗೆ ಅನುಸರಿಸಬೇಕಾದ ಮಾರ್ಗಗಳ ಕುರಿತ ಪೂರ್ಣ ಮಾಹಿತಿ ಕೂಡ ಇಲ್ಲಿದೆ. ರಾಷ್ಟ್ರದ ಬಗ್ಗೆ ಕಳಕಳಿಯುಳ್ಳ ಪ್ರತಿಯೊಬ್ಬರೂ ಈ ಕೃತಿಯನ್ನು ಓದಬೇಕು; ಮನಸ್ಸಿಟ್ಟು ಅಧ್ಯಯನ ಮಾಡಬೇಕು.

ಭಾರತವು ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನ ಸಂಸ್ಕೃತಿಯನ್ನೊಳಗೊಂಡ ದೇಶ. ತನ್ನ ಆಂತರಿಕ ಶಕ್ತಿಯಿಂದ ಪ್ರವರ್ಧಮಾನಕ್ಕೆ ಬಂದು, ಇಡೀ ವಿಶ್ವಕ್ಕೆ ಬೆಳಕಾಗಬೇಕಿದ್ದ ಭಾರತವು ಜಾತಿ, ವರ್ಣ ವ್ಯವಸ್ಥೆಗಳೂ ಕಾರಣವಾಗಿ, ಅನ್ಯರ ಆಕ್ರಮಣಕ್ಕೆ ತುತ್ತಾಯಿತು. ಶತಶತಮಾನಗಳ ಕಾಲ ಪರಕೀಯರ ಆಳ್ವಿಕೆಗೆ ಒಳಗಾಯ್ತು. ಆದರೂ, ಅಂತಃಸತ್ವ ಅಳಿಯದೆ, ಇಂದಿಗೂ ಉಳಿದು ಬಂದಿರುವುದು ಅದರ ಶಕ್ತಿಯ ದ್ಯೋತಕವಾಗಿದೆ.

ಭಾರತದ ಸ್ವಾತಂತ್ರ್ಯ ಹೋರಾಟ ಒಂದು ರೋಮಾಂಚನ ಕಾರಿ ಘಟನೆ. ಇಡೀ ವಿಶ್ವದ ಗಮನವನ್ನು ತನ್ನೆಡೆಗೆ ಸೆಳೆದುಕೊಂಡ ಆ ಹೋರಾಟದ ಪುಳಕ, ಬಹಳ ಕಾಲ ಉಳಿಯಲಿಲ್ಲ. ಸ್ವಾತಂತ್ರ್ಯ ಬಂದ ಮೊದಲ ದಶಕದಲ್ಲಿಯೇ ಕತ್ತಲು ಕವಿಯತೊಡಗಿತು. ನಿರಾಶೆ ಆವರಿಸಿಕೊಳ್ಳತೊಡಗಿತು. ಅಸಹಾಯಕತೆ ಅಪ್ಪಿಕೊಳ್ಳ ತೊಡಗಿತು. ನಕಾರಾತ್ಮಕತೆ ಎಲ್ಲರನ್ನು ನುಂಗ ತೊಡಗಿತು. ಭರವಸೆಯ ಬೆಳಕು ಕಾಣದಂತೆ ಭ್ರಷ್ಟಾಚಾರದ ಕಾರ್ಮೋಡ ದಟ್ಟವಾಗಿ ಕವಿಯತೊಡಗಿತು.

ಲೋಹಿಯಾ ಅವರೇ ಒಂದು ಕಡೆ 'ಸ್ವಾತಂತ್ರ್ಯಾನಂತರ ಕಾಣಿಸಿಕೊಂಡ ಭಾರತ ಒಂದು ವಿಚಿತ್ರ ಭಾರತ. ಗುಲಾಮಗಿರಿ ಯಲ್ಲಿದ್ದಾಗ ಹೊರಗೆ ಕತ್ತಲು ಕವಿದಿತ್ತು; ಆದರೆ, ಒಳಗೆ ಬೆಳಕಿತ್ತು. ಈಗ ಹೊರಗೆ ಸ್ವಾತಂತ್ರ್ಯದ ಬೆಳಕಿದೆ; ಆದರೆ, ಒಳಗೆ ಕತ್ತಲೆ ಕವಿದಿದೆ' ಎಂದು ಡಾ॥ ಲೋಹಿಯಾ 1950ರ ಸುಮಾರಿಗೆ ನೊಂದು ನುಡಿದಿದ್ದರೆ, ರಾಷ್ಟ್ರ ಕವಿ ಕುವೆಂಪು–

'ಅಂದೋ? ಹಿಂದಕ್ಕೆ ಗುರುವಿದ್ದ ಮುಂದಕ್ಕೆ ಗುರಿ ಇತ್ತು; ನುಗ್ಗಿತು ಮುಂದೆ ಧೀರ ದಂಡು; ಇಂದೋ? ಹಿಂದಕ್ಕೆ ಗುರುವಿಲ್ಲ ಮುಂದಕ್ಕೆ ಗುರಿ ಇಲ್ಲ; ನುಗ್ಗುತಿದೆ ಮುಂದೆ ಹೇಡಿ ಹಿಂಡು' ಎಂದು 1956ರಲ್ಲಿ ತಮ್ಮ ಅಳಲನ್ನು ತೋಡಿಕೊಂಡರು.

ಈಗ ನಾವು ನಮ್ಮ ಅಂತರಂಗದ ಕರೆಗೆ ಓಗೊಡ ಬೇಕಾಗಿದೆ. ಮನುಷ್ಯನ ಮನಸ್ಸು ಆಮಿಷಗಳಿಗೆ ಒಳಗಾದರೂ, ಹೃದಯ ನಿಜದ ಎಚ್ಚರಿಕೆಯನ್ನು ಸದಾ ನೀಡುತ್ತಿರುತ್ತದೆ. ಹೃದಯದ

ಆ ಕರೆಗೆ ನಾವು ಕಿವಿಗೊಡಬೇಕು. ಹಾಗೆ ಕಿವಿಗೊಟ್ಟು ಕೇಳಿದವರು ವಿಶ್ವದ ಮಹಾನ್ ಶಕ್ತಿಗಳಾಗಿದ್ದಾರೆ. ಅಕ್ಷರಸ್ಥರು–ಅನಕ್ಷರಸ್ಥರು ಎನ್ನದೆ, ಅವರು ಮನುಕುಲದ ಮುನ್ನಡೆಗೆ ಪ್ರೇರಕ ಶಕ್ತಿಯಾಗಿದ್ದಾರೆ. ಇಂದಿಗೂ ಬುದ್ಧ ಬೆಳಗುತ್ತಿದ್ದಾನೆ. ಸಾಕ್ರೆಟಿಸ್ ಸಂವಾದ ಮಾಡುತ್ತಿದ್ದಾನೆ, ಮಾರ್ಕ್ಸ್ ಬೆವರು ಬಸಿವ ಶ್ರಮಿಕರ ಶಕ್ತಿಯಾಗಿದ್ದಾನೆ. ಉತ್ತಮ ಚಿಂತನೆಗಳು ಬೆಳಕಿನ ಕಿರಣಗಳು. ಅವುಗಳನ್ನು ಹಿಡಿದು, ನಾವಿಂದು ಭಾರತವನ್ನು ಆವರಿಸುತ್ತಿರುವ ಕತ್ತಲನ್ನು ಕಿತ್ತೊಗೆಯಬೇಕಾಗಿದೆ.

ನಮ್ಮನ್ನು ಆವರಿಸಿಕೊಳ್ಳುತ್ತಿರುವ ದೌರ್ಬಲ್ಯವನ್ನು ಕುರಿತು ಲೋಹಿಯಾ 'ಬಹುತೇಕರು ತಮ್ಮನ್ನು ಮೇಲ್ಮಟ್ಟದವರೊಂದಿಗೆ ಹೋಲಿಸಿಕೊಂಡು, ಅವರ ಮಟ್ಟಕ್ಕೆ ಏರಬೇಕು ಎಂದು ಹವಣಿಸುವವರೇ. ಆದರೆ, ನೈಜ ಸಮಾಜವಾದಿಗಳು ತಮಗಿಂತ ಕೆಳಮಟ್ಟದಲ್ಲಿ ಇರುವವರನ್ನು ಗುರುತಿಸಿ, ಅವರನ್ನು ಜೊತೆ ಸೇರಿಸಿಕೊಂಡು, ಮೇಲ್ಮಟ್ಟವನ್ನು ಏರಲು ಬಯಸುವವರು' ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

'ಈ ದೌರ್ಬಲ್ಯ ನಮ್ಮನ್ನು ಸರಿಯಾದ ಮಾರ್ಗದಲ್ಲಿ ಚಿಂತಿಸುವಂತೆ ಪ್ರೇರೇಪಿಸಬೇಕು. ಹಾಗೆ ಪ್ರೇರೇಪಿಸಿದಾಗ ಮಾತ್ರ ಮರೆಯಾಗಿರುವ ಮಣ್ಣಿನ ಕಣ್ಣು ತೆರೆದು ಬೆಳಗಿನ ದಾರಿ ಗೋಚರವಾಗುತ್ತದೆ.

ಜಾತಿ ಈ ದೇಶದ ದೊಡ್ಡ ರೋಗ. ಕೆಳಜಾತಿ ಮತ್ತು ಮೇಲ್ಜಾತಿ ಎಂಬ ಹುಸಿ ಭ್ರಮೆಗೆ ಸಿಲುಕಿರುವ ಭಾರತ, ತನ್ನೆಲ್ಲ ಶಕ್ತಿಯನ್ನು ಕಳೆದುಕೊಂಡು ಕಳೆಗುಂದಿದೆ. ಈ ಕೆಳ ಮತ್ತು ಮೇಲ್ಜಾತಿಯ ಅಂತರಂಗವನ್ನು ಅರಿತ ಲೋಹಿಯಾ

"ಸಂತೋಷಿಸುವ ಸಹಜ ಸಾಮರ್ಥ್ಯದೊಂದಿಗೆ ಕೆಳಜಾತಿಯವರದು ಒರಟುತನ ಮತ್ತು ಉದ್ದೇಶರಹಿತ ಬದುಕು; ಮೇಲ್ಜಾತಿಯವರದು ವಿದ್ಯೆ ಹಾಗೂ ಸಂಸ್ಕೃತಿಯೊಂದಿಗೆ ನಯವಂಚನೆ, ಸ್ವಾರ್ಥ ಹಾಗೂ ನಿರ್ಜೀವ ಬದುಕು; ಇವೆರಡನ್ನೂ ಭಾರತದಲ್ಲಿ ಕಾಣಬಹುದು" ಎಂದು ಹೇಳುತ್ತಾರೆ.

ನಿಜ, ಕೆಳಜಾತಿಯವರಲ್ಲಿ ದೂರಗಾಮಿ ದೃಷ್ಟಿಕೋನ ಮೂಡಬೇಕು. ಅವರು ಜೀವನದಲ್ಲಿ ಧೃಡ ಗುರಿಯನ್ನು ಹೊಂದುವುದು ಸಾಧ್ಯವಾಗಬೇಕು. ಹಾಗೆಯೇ, ಮೇಲ್ಜಾತಿಯವರಲ್ಲಿ ಮನೆ ಮಾಡಿರುವ ನಯವಂಚನೆ ಅಳಿಯಬೇಕು, ಸ್ವಾರ್ಥ ದೂರವಾದ ಜೀವಂತ ಬದುಕು ಅರಳಬೇಕು. ಆಗ ಮಾತ್ರ ಇಲ್ಲಿ ಮನುಷ್ಯತ್ವ ಕಣ್ತೆರೆಯಲು ಸಾಧ್ಯ.

ಜಾತಿ ಮತ್ತು ವರ್ಣ ವ್ಯವಸ್ಥೆಯ ಕ್ರೂರ ಹಿಡಿತಕ್ಕೆ ಸಿಲುಕಿ, ಭಾರತ ತನ್ನ ಚಲನಶೀಲತೆಯನ್ನು ಕಳೆದುಕೊಂಡಿದೆ. ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ ಮುಂತಾದ ರೋಗಗಳಿಂದ ನಲುಗುತ್ತಿದೆ. ಇವುಗಳನ್ನು ತೊಡೆದು ಸಮಾನತೆಯನ್ನು ಹುಟ್ಟುಹಾಕುವ ಯತ್ನದಲ್ಲಿ ಉಪನಿಷತ್ತುಗಳು, ಗೌತಮ ಬುದ್ಧ, ಬಸವಣ್ಣ, ಕಬೀರ, ಕನಕ, ನಾರಾಯಣ ಗುರು, ರಾಮಕೃಷ್ಣ ಪರಮಹಂಸ, ರಮಣ ಮಹರ್ಷಿ, ಸ್ವಾಮಿ ವಿವೇಕಾನಂದ, ದಯಾನಂದ ಸರಸ್ವತಿ, ಜ್ಯೋತಿಬಾ ಫುಲೆ, ಪೆರಿಯಾರ್, ಡಾ॥ ಅಂಬೇಡ್ಕರ್, ಕುವೆಂಪು ಮುಂತಾದವರು ಶ್ರಮಿಸಿದ್ದಾರೆ. ಕೇವಲ ಜಾತಿ, ಮತ, ವರ್ಣಗಳನ್ನು ಮೀರುವುದಷ್ಟೇ ಅಲ್ಲ ವಿಶ್ವ ಮಾನವರಾಗುವ ಎತ್ತರಕ್ಕೆ ಕೈ ಬೀಸಿ ಕರೆದಿದ್ದಾರೆ. ಈ ಚಿಂತನೆಯಿಂದ ಲೋಹಿಯಾ ಅವರೂ ಹಿಂದಿಲ್ಲ. ಅವರು

'ಇನ್ನು ನಾವು ಎಲ್ಲಾ ಮಾನವರಲ್ಲಿ ಸಮಾನತೆ ಮೂಡುವುದನ್ನು ಸಾಧ್ಯವಾಗಿಸಬೇಕು. ಶೂದ್ರರೂ, ದ್ವಿಜರೂ ಮೂಲಭೂತವಾಗಿ ಅರೆಜೀವವಾಗಿ ಬಿದ್ದಿದ್ದಾರೆ. ಶೂದ್ರರನ್ನು ದ್ವಿಜರೂ, ದ್ವಿಜರನ್ನು ಶೂದ್ರರೂ ಮೇಲೆತ್ತಬೇಕಾಗಿದೆ' ಎಂದರು.

ಲೋಹಿಯಾ ಅದೆಷ್ಟು ವಾಸ್ತವವಾಗಿ, ಭವ್ಯವಾಗಿ ಚಿಂತಿಸಬಲ್ಲರು ಎಂಬುದಕ್ಕೆ ಈ ಮೇಲಿನ ಮಾತು ಸಾಕ್ಷಿಯಾಗಿದೆ. ಶತಮಾನಗಳ ಕಾಲದ ಚಾತುರ್ವರ್ಣ ಪದ್ಧತಿಯಿಂದಾಗಿ ಶೂದ್ರರಲ್ಲಿ ಶಕ್ತ ಮತ್ತು ದ್ವಿಜರಲ್ಲಿ ಜ್ಞಾನ ಶೇಖರಣೆಗೊಂಡಿದೆ. ಶೂದ್ರರು ದ್ವಿಜರನ್ನೂ, ದ್ವಿಜರು ಶೂದ್ರರನ್ನೂ ಪುಷ್ಟೀಕರಿಸುವ ಅವಶ್ಯಕತೆ ಇದೆ. ಅರೆಜೀವವಾಗಿ ಬಿದ್ದಿರುವ ಇವರಿಬ್ಬರೂ ಪರಸ್ಪರರನ್ನು ಪ್ರಗತಿ ಪಥದತ್ತ ಕರೆದೊಯ್ಯುವ ಕೆಲಸ ಕೈಗೊಳ್ಳಬೇಕು. ಹೀಗಾದಾಗ, ಇಬ್ಬರೂ ಶಕ್ತಿವಂತರಾಗುತ್ತಾರೆ. ಆಗ ಭಾರತೀಯರು ಒಂದು ಜನಾಂಗವಾಗಿ, ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ. ಆ ಸಾಧ್ಯತೆಯ ತುಡಿತ ನಮ್ಮ ನಾಡಿಯ ಮಿಡಿತವಾಗಬೇಕು.

ವಿಶ್ವ ಇಂದಿಗೂ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವೋ ಎಂಬಂತೆ ಡಾ॥ ಲೋಹಿಯಾ ಜೂನ್ 1, 1940ರ 'ಹರಿಜನ' ಪತ್ರಿಕೆಯಲ್ಲಿ ನಾಲ್ಕು ಅಂಶಗಳ ಕಾರ್ಯಕ್ರಮವನ್ನು ಪ್ರತಿಪಾದಿಸಿದ್ದರು. ಈ ಅಂಶಗಳ ಕಡೆಗೆ ವಿಶ್ವದ ಕಣ್ಣು ತೆರೆಯಬೇಕಾಗಿದೆ. ಆ ನಾಲ್ಕು ಅಂಶಗಳೆಂದರೆ,

1. ಎಲ್ಲ ರಾಷ್ಟ್ರಗಳೂ ಸ್ವತಂತ್ರವಾಗಬೇಕು. ಇದೀಗ ಸ್ವಾತಂತ್ರ್ಯ ಪಡೆದುಕೊಂಡ ರಾಷ್ಟ್ರಗಳು ವಯಸ್ಕ ಮತದಾನವನ್ನು ಅನುಸರಿಸಬೇಕು. ಆ ಮೂಲಕ ಆಯ್ಕೆಗೊಂಡ ಶಾಸನಸಭೆಗಳ ತೀರ್ಮಾನಗಳಿಂದ ಎಂಥ ಸಂವಿಧಾನ ಬೇಕೆಂಬುದನ್ನು ತೀರ್ಮಾನ ಮಾಡಬೇಕು.

2. ಎಲ್ಲ ಜನಾಂಗಗಳೂ ಸಮಾನವಾಗಿದ್ದು, ಜಗತ್ತಿನ ಯಾವುದೇ ಭಾಗದಲ್ಲಿ ಯಾವುದೇ ಜನಾಂಗಕ್ಕೆ ವಿಶೇಷ ಅಧಿಕಾರ ಇರಕೂಡದು. ಎಲ್ಲರಿಗೆ ಎಲ್ಲೇ ಆಗಲಿ ವಾಸಿಸುವ ಅವಕಾಶ ಇರಬೇಕು.

3. ಒಂದು ದೇಶದ ಅಥವಾ ಒಂದು ದೇಶದ ನಾಗರಿಕರ ಬಂಡವಾಳ ಬೇರೊಂದು ದೇಶದಲ್ಲಿ ಹೂಡಿಕೆಯಾಗುವುದನ್ನು ತಡೆಗಟ್ಟಬೇಕು.

4. ಪ್ರಪಂಚದಲ್ಲಿ ಹಂತ ಹಂತವಾಗಿ ಸಂಪೂರ್ಣ ನಿ:ಶ್ಶಸ್ತ್ರೀಕರಣ ಸಾಧ್ಯ ಆಗಬೇಕು.

ಇವು ಅತಿ ಮಹತ್ವದ ವಿಷಯಗಳು. ಈ ಕುರಿತು ಈವರೆಗೆ ಪರಿಣಾಮಕಾರಿ ಚಿಂತನೆಗಳು ನಡೆದಿಲ್ಲ.

ಭಾರತಕ್ಕೆ ಇಂದು ಚಾರಿತ್ರ್ಯ ನಿರ್ಮಾಣದ ತೀವ್ರ ಅಗತ್ಯವಿದೆ. ಅದನ್ನು ಹೇಗೆ ಮಾಡಬಹುದು ಎಂಬುದಕ್ಕೆ ಲೋಹಿಯಾ,

'.. .. ದುರಾಶೆ ಮತ್ತು ಧನಲೋಭಗಳಿಂದ ಚಾರಿತ್ರ್ಯಕ್ಕೆ ದೊಡ್ಡ ಅಪಾಯ ಒದಗುತ್ತಿದೆ. ಸಾಮಾಜಿಕ ಪ್ರತಿಷ್ಠೆ ಇದಕ್ಕೆ ಇಂಧನವಾಗಿದೆ. ಜನರಿಗೆ ಹಣ ಬೇಕಾಗಿದೆ. ಹಣವಲ್ಲದೆ ಮತ್ತೇನೂ ಬೇಕಾಗಿಲ್ಲ ಎನ್ನುವಷ್ಟು ಧೃತಿಗೆಟ್ಟು ನುಗ್ಗುತ್ತಿದೆ. ಈಗ ಈ ದುರಾಸೆ, ಧನಲೋಭಗಳ ಮೇಲಿನ ಆಕ್ರಮಣ ಮೇಲ್ಮಟ್ಟದಲ್ಲಿ ನಡೆಯಬೇಕು. ಜನರ ವ್ಯಾಮೋಹ ತೊಡೆಯಲು ಇರುವುದು ಇದೊಂದೇ ಮಾರ್ಗ' ಎಂದಿದ್ದಾರೆ.

ಚಾರಿತ್ರ್ಯ ನಿರ್ಮಾಣ ಆಗದೇ ಹೋದರೆ, ಪ್ರಜಾಪ್ರಭುತ್ವವೇ ಇರುವುದಿಲ್ಲ. ಅದರ ಹೆಸರಿನಲ್ಲಿ ಬಂಡವಾಳಶಾಹಿಯ ಕ್ರೌರ್ಯ ಹೆಡೆ ಎತ್ತುತ್ತದೆ. ಬಂಡವಾಳಶಾಹಿಗಳ ವ್ಯೂಹವನ್ನು, ಬಹುರಾಷ್ಟ್ರೀಯ ಕಂಪನಿಗಳ ಆಕ್ರಮಣವನ್ನು ಗಮನಿಸಿದರೆ, ಇದರಿಂದ ಭಾರತಕ್ಕೆ ಅಷ್ಟೇ ಅಲ್ಲ, ಇಡೀ ವಿಶ್ವಕ್ಕೆ ಅಪಾಯವಿದೆ. ಈ ಬಂಡವಾಳಶಾಹಿಗಳ ಕಬಂಧ ಬಾಹುಗಳು ವಿಶ್ವದಗಲಕ್ಕೂ ಚಾಚಿ, ನುಂಗಿ ನೊಣೆಯಲು ಹವಣಿಸುತ್ತಿವೆ.

ಭಾರತವನ್ನು ಒಂದು ವಿಚಿತ್ರ ಸ್ಥಿತಿ ಕಾಡುತ್ತಿದೆ. ಒಲಿದು ಒಂದಾಗುವುದಲ್ಲ; ಒಡೆದು ಹೋಳಾಗುವುದು ಭಾರತೀಯರ ಗುಣವಾಗಿಬಿಟ್ಟಿದೆ. ಇದು ಯಾವ ಕ್ಷೇತ್ರವನ್ನೂ ಬಿಡದಷ್ಟು ವ್ಯಾಪಕವಾಗಿ ಹಬ್ಬಿದೆ. ಇದರ ದುರ್ಲಾಭವನ್ನು ದುಷ್ಟಶಕ್ತಿಗಳು ಪಡೆದುಕೊಳ್ಳುತ್ತಿವೆ. ಇವನ್ನು ನಿಯಂತ್ರಿಸದಿದ್ದರೆ, ನಾಶಕ್ಕೆ ನಾಂದಿಯಾಗಿಬಿಡುತ್ತವೆ. ಲೋಹಿಯಾ ಅವರ ಆ ಕಾಣ್ಕೆಗಳನ್ನು ಅರಿತುಕೊಳ್ಳುವ ಇಚ್ಛಾಶಕ್ತಿ ನಮಗೆ ಸಾಧ್ಯವಾಗಿ, ಇಂದಿನ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ರೂಪಿಸಿಕೊಂಡು, ಅವುಗಳನ್ನು ನಿಯಂತ್ರಿಸಬಹುದಾದ ಅನೇಕ ಚಿಂತನೆಗಳು, ಯೋಜನೆಗಳು ನಮಗೆ ಅಗತ್ಯವಾಗಿವೆ.

ಕೆಲವು ವರ್ಷಗಳ ಹಿಂದೆ, ಸಮಾಜವಾದಿಗಳ ಸಮಾವೇಶವೊಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಜರುಗಿತು. ಬಿಹಾರದ ಕಿಷನ್ ಪಾಟ್ನಾಯಿಕ್, ಬಂಗಾಳದ ರೋಮಾ ಮಿತ್ರ, ಕರ್ನಾಟಕದ ಪ್ರೊ॥ ಎಂ. ಡಿ. ನಂಜುಂಡಸ್ವಾಮಿ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪಿ. ಲಂಕೇಶ್, ಎನ್. ಡಿ. ಸುಂದರೇಶ್, ಚಂದ್ರಶೇಖರ ಪಾಟೀಲ, ನೆಲಮನೆ ಕೆ. ದೇವೆಗೌಡ, ರವಿವರ್ಮ ಕುಮಾರ್ ಮತ್ತು ಅನೇಕ ಯುವ ಗೆಳೆಯರು ಆ ಸಮಾವೇಶದಲ್ಲಿ ಭಾಗವಹಿಸಿದ್ದರು. ಎಲ್ಲರೂ ಸಮಾಜವಾದದ ಬಗ್ಗೆ, ಡಾ॥ ಲೋಹಿಯಾ ಬಗ್ಗೆ ಮಾತನಾಡಿದರು. ಅವರೆಲ್ಲರೂ 'ಸಮಾಜವಾದಿಗಳು ಪುಸ್ತಕದ ವಿಮುಖತೆಯನ್ನು ಗೆಲ್ಲಬೇಕು' ಎಂಬ ಲೋಹಿಯಾ ಮಾತನ್ನು ನೆನಪಿಸಿಕೊಳ್ಳಲಾಯಿತು. ಲೋಹಿಯಾ ಅವರ ಕೃತಿಗಳು ಲಭ್ಯವಾಗುವಂತೆ ಮಾಡುವುದು ನಮ್ಮೆಲ್ಲರ ಇಂದಿನ ತುರ್ತು ಕರ್ತವ್ಯವಾಗಿದೆ. ಲಭ್ಯ ಇರುವ ಕೃತಿಗಳನ್ನು ಎಲ್ಲರಿಗೆ ತಲುಪಿಸುವ ಕೆಲಸವೂ ಯಶಸ್ವಿಯಾಗಿ ನಡೆಯಬೇಕಿದೆ.

ರೈತ ಚಳವಳಿ ಈಗ ಪ್ರಪಂಚದಾದ್ಯಂತ ಹಬ್ಬಿದೆ. ಸಾವಯವ ಕೃಷಿಯ ಮಹತ್ವ ಮನುಕುಲಕ್ಕೆ ಮನವರಿಕೆಯಾಗುತ್ತಿದೆ. ರಾಸಾಯನಿಕ, ಹೈಬ್ರೀಡ್ ತಳಿಗಳು, ಕ್ಲೋನಿಂಗ್‌ಗಳ ವಿರುದ್ಧ ಹಾಗೂ ಬಹುರಾಷ್ಟ್ರೀಯ ಕಂಪನಿಗಳ, ವಿಶ್ವ ಮಾರಾಟ ಸಂಸ್ಥೆಯ ವಿರುದ್ಧ ಜಾಗತಿಕ ಪ್ರತಿಭಟನೆಗಳು ನಡೆಯುತ್ತಿವೆ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ಪರಿಣಾಮಕಾರಿಯಾಗಿ ಕಾರ್ಯ ಚಟುವಟಿಕೆಗಳನ್ನು ನಡೆಸಿದ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಇತರ ಸಮಾನಮನಸ್ಕ ಸಂಘಟನೆಗಳು ರೈತಾಪಿ ವರ್ಗದ ಹಕ್ಕುಗಳನ್ನು ಪ್ರತಿಪಾದಿಸಲು ಧೃಡ ನಿರ್ಧಾರ ಮಾಡಿರುವುದನ್ನು ನಾವು ನೋಡುತ್ತಿದ್ದೇವೆ.

ಈ ಹೊತ್ತಿನಲ್ಲೂ ಲೋಹಿಯಾ ಮತ್ತು ಇತರ ಸಮಾಜವಾದಿಗಳು ಕೃತಿಗಳ ಪ್ರಕಟಣೆಯ ಹಾಗೂ ಅಧ್ಯಯನಕ್ಕೆ ಅಗತ್ಯವಾದ ವಾತಾವರಣ ನಿರ್ಮಾಣ ಆಗಬೇಕಿದೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಲೋಹಿಯಾ ಮತ್ತು ಇತರ ಸಮಾಜವಾದಿಗಳ ಕೃತಿಗಳನ್ನು ಆಗೊಮ್ಮೆ, ಈಗೊಮ್ಮೆ ಪ್ರಕಟಿಸುತ್ತಿರುವುದೂ ಉಂಟು. ಆದರೆ, ಅದೇನಿದ್ದರೂ ಅರೆಪಾವು ಮಜ್ಜಿಗೆಯಂತೆ. ಲೋಹಿಯಾ ಮತ್ತು ಸಮಾಜವಾದದಲ್ಲಿ ನಂಬಿಕೆ ಇಟ್ಟುಕೊಂಡಿರುವವರು ಈಗ ತಾವೇ ಪುಸ್ತಕಗಳನ್ನು ಪ್ರಕಟಿಸುವ ಮತ್ತು ಪ್ರಸಾರ ಮಾಡುವ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಮುಂದೆ ಬರಬೇಕಿದೆ.

**ಮೂಲ: ಜ.ಹೋ.ನಾರಾಯಣಸ್ವಾಮಿ**

**ಆತ್ಮೀಯರೆ,**

ಲೋಹಿಯಾ ಅಥವಾ ಯಾವುದೇ ಭಾರತೀಯ ಸಮಾಜವಾದಿ ಯಾವುದೇ ಭಾಷೆಯಲ್ಲಿ ಬರೆದ ಅಥವಾ ಅವರ ಬಗ್ಗೆ ಇತರರು ಬರೆದ ಪುಸ್ತಕಗಳು, ಪತ್ರಿಕೆಗಳು ನಿಮ್ಮಲ್ಲಿ ಇದ್ದರೆ, ದಯಮಾಡಿ ಕೂಡಲೇ ನಮ್ಮನ್ನು ಸಂಪರ್ಕಿಸಿ. ಅವುಗಳನ್ನು ಸಂಗ್ರಹಿಸಲು ನಾವು ಇಚ್ಛಿಸಿದ್ದೇವೆ. ನಿಮ್ಮ ಸಹಕಾರ ಇರಲಿ.

● **ಮಂಗ್ಳೂರ ವಿಜಯ**
94491–02294